SC Criminal 60/2020
PW: 12
CW: 24

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## SESSIONS CASE : 60/2020

**ಪ್ರಾ.ಸಾ. 12**

**ದೋ.ಸಾ. 24**

| | | |
|---|---|---|
| ಸಾಕ್ಷಿಯ ಹೆಸರು | : | ಗಂಗರಾಜು |
| ತಂದೆಯ ಹೆಸರು | : | ನಂಜುಂಡಪ್ಪ |
| ವಯಸ್ಸು | : | 23 ವರ್ಷ |
| ಉದ್ಯೋಗ | : | ಗಾರೆಕೆಲಸ |
| ವಾಸ | : | ಕಮಲಾಪುರ ಗ್ರಾಮ, ಗೌರಿಬಿದನೂರು ತಾಲ್ಲೂಕು |

**ದಿನಾಂಕ 12.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ಮೃತ ರಾಧ ನನಗೆ ಗೊತ್ತಿಲ್ಲ. ಚಾಸಾ-1, 23 ನನಗೆ ಗೊತ್ತು. ಚಾಸಾ-22 ನನ್ನ ತಮ್ಮ. ಚಾಸಾ-2 ರಿಂದ 21, 25 ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಅಣ್ಣ.

2). ಈಗ ಸಾಕ್ಷಿಗೆ ದಿನಾಂಕಃ16-01-2020ರ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-18 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-18(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಮಂಚೇನಹಳ್ಳಿ ಬಸ್ ಸ್ಟ್ಯಾಂಡ್ ಬಳಿ ಸಹಿ ಮಾಡಿರುತ್ತೇನೆ. ಸದರಿ ಸಹಿ ಯಾವಾಗ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಯಾವ ವಿಚಾರಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಈಗ ಗೊತ್ತಿಲ್ಲ. ನನ್ನ ಜೊತೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-18 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಮೃತ ರಾಧ ಹೇಗೆ ತೀರಿಕೊಂಡಳು

ಎಂಬ ಬಗ್ಗೆ ನನಗೆ ಗೊತ್ತಿಲ್ಲ ಹಾಗೂ ಆಕೆಯ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು.)**

**<u>ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

3). ದಿನಾಂಕ 16.01.2020 ರಂದು ಬೆಳಿಗ್ಗೆ 11.00 ಗಂಟೆಗೆ ಮಂಚೇನಹಳ್ಳಿ ಪೊಲೀಸ್ ಠಾಣೆಯ ಪೊಲೀಸರು ನನ್ನನ್ನು ಹಾಗೂ ಚಾಸಾ-23 ರವರನ್ನು ಪಂಚರಾಗಿ ತೊಂಡೇಭಾವಿಯ ರೇಲ್ವೇ ಸ್ಟೇಷನ್ ಬಳಿ ಮಂಚೇನಹಳ್ಳಿಗೆ ಹೋಗುವ ಮುಖ್ಯ ರಸ್ತೆಯಲ್ಲಿರುವ ಬಾಬಾಜಾನ್ ರವರ ದಿನಸಿ ಅಂಗಡಿಗೆ ಬರಲು ಹೇಳಿದರು ಎಂದರೆ ಸರಿಯಲ್ಲ. ನಂತರ ನಾನು ಹಾಗೂ ಚಾಸಾ-23 ರವರು ಪಂಚರಾಗಿ ಸಹಕರಿಸಲು ಸದರಿ ಸ್ಥಳಕ್ಕೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಚಾಸಾ-22 ನನ್ನ ತಮ್ಮ ತಾನು ದಿಃ06.01.2020 ರಂದು ರಾತ್ರಿ ಸುಮಾರು 8.30 ಗಂಟೆಯ ಸಮಯದಲ್ಲಿ ಇದೇ ಅಂಗಡಿಯಲ್ಲಿ ಇಲಿ ಪಾಶಾಣವನ್ನು ಖರೀಧಿಸಿದ್ದು ಎಂದು ಹೇಳಿ, ಸದರಿ ಅಂಗಡಿಯನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ಥಳವನ್ನು ಪೋಲಿಸರು ಪರಿಶೀಲನೆ ಮಾಡಿ ಅದು ತೊಂಡೇಭಾವಿ ರೈಲ್ವೇ ನಿಲ್ದಾಣದಿಂದ ಮಂಚೇನಹಳ್ಳಿಗೆ ಹೋಗುವ ಮುಖ್ಯರಸ್ತೆಯಲ್ಲಿರುವ ಬಾಬಾಜಾನ್ ಬಾಬ್ತು ದಿನಸಿ ಅಂಗಡಿಯಾಗಿರುತ್ತದೆ ಎಂದರೆ ಸರಿಯಲ್ಲ. ಅಂಗಡಿಯಲ್ಲಿದ್ದ ಮಾಲೀಕ ಬಾಬಾಜಾನ್ ಚಾಸಾ-22 ನನ್ನ ತಮ್ಮನನ್ನು ನೋಡಿ ಗುರುತಿಸಿದ್ದು, ದಿಃ06-01-2020 ರಂದು ರಾತ್ರಿ ಸುಮಾರು 8.30 ಗಂಟೆ ಸಮಯದಲ್ಲಿ ಚಾಸಾ-22 ನನ್ನ ತಮ್ಮ ಅಂಗಡಿಯಿಂದ ಒಂದು ಇಲಿ ಪಾಶಾಣದ ಡಬ್ಬಿಯನ್ನು ಖರೀಧಿ ಮಾಡಿಕೊಂಡು ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಸ್ಥಳದ ಚೆಕ್ಕುಬಂಧಿ ಪೂರ್ವಕ್ಕೆ ಸಾಯಿ

ಟೈಲರ್ ಅಂಗಡಿ, ಪಶ್ಚಿಮಕ್ಕೆ ಅಶ್ವತನಾರಾಯಣರವರ ಫ್ಯಾನ್ಸಿ ಅಂಗಡಿ ಉತ್ತರಕ್ಕೆ ತೊಂಡೇಭಾವಿ ರೇಲ್ವೆ ಸ್ಟೇಷನ್ ನಿಂದ ಮಂಚೇನಹಳ್ಳಿ ಗ್ರಾಮಕ್ಕೆ ಹೋಗುವ ಟಾರ್ ರಸ್ತೆ, ದಕ್ಷಿಣಕ್ಕೆ ಬಾಬಾಜಾನ್ ರವರ ವಾಸದ ಮನೆ ಎಂದರೆ ಸರಿಯಲ್ಲ. ನಿಪಿ–18 ನ್ನು ಬೆಳಿಗ್ಗೆ 11.00 ರಿಂದ 11.40 ಗಂಟೆಯವರೆಗೆ ನನ್ನ ಹಾಗೂ ಚಾಸಾ–22 ನನ್ನ ತಮ್ಮ ಹಾಗೂ ಚಾಸಾ–23 ರವರ ಸಮಕ್ಷಮ ಮಂಚೇನಹಳ್ಳಿ ಪೊಲೀಸರು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನನ್ನ ಅಣ್ಣನನ್ನು ವಿಚಾರಣೆ ಮಾಡಲಾಗಿ ನನ್ನ ಅಣ್ಣ ರಾಧಳನ್ನು ಪ್ರೀತಿಸುತ್ತಿದ್ದು, ಇಬ್ಬರು ಮಾತನಾಡಿಕೊಳ್ಳಲು ಒಂದು ಸಿಮ್ ನ್ನು ಕೊಡಿಸಿರುತ್ತಾನೆ ಹಾಗೂ ಇಬ್ಬರೂ ಫೋನ್ ನಲ್ಲಿ ಮಾತನಾಡಿಕೊಳ್ಳುತ್ತಿರುತ್ತಾರೆ, ಇತ್ತೀಚೆಗೆ ನನ್ನ ಅಣ್ಣ ವೆಂಕಟೇಶ್ ರಾಧಾಳಿಗೆ ಫೋನ್ ಮಾಡಿದಾಗ, ಫೋನ್ ಬ್ಯುಸಿ ಬಂದಿದ್ದು, ರಾಧ ಬೇರೆ ಯಾರ ಜೊತೆ ಮಾತನಾಡುತ್ತಿದ್ದಾಳೆ ಎಂದು ಅನುಮಾನಪಟ್ಟು, ನನಗೆ ಸಿಗದವಳು ಬೇರೆ ಯಾರಿಗೂ ಸಿಗಬಾರದು ಎಂದು ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ಇಲಿ ಪಾಶಾಣವನ್ನು ನಾವಿಬ್ಬರೂ ಸೇವನೆ ಮಾಡೋಣ ಎಂದು ಹೇಳಿ ರಾಧಾಳನ್ನು ಪುಸಲಾಯಿಸಿ ಇಲಿ ಪಾಶಾಣವನ್ನು ಕುಡಿಯಲು ಪ್ರೇರೇಪಿಸಿ ಇಲಿ ಪಾಶಾಣವನ್ನು ಕುಡಿಯಿಸಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಅಣ್ಣ ವೆಂಕಟೇಶ್ ಇಲಿ ಪಾಶಾಣವನ್ನು ಮೂತಿಗೆ ಬಳಿದುಕೊಂಡು, ಇಲಿ ಪಾಶಾಣವನ್ನು ಸೇವಿಸಿರುವಂತೆ ನಟಿಸಿ ಗ್ರಾಮದಲ್ಲಿದ ಜನರಿಗೆ ಪ್ರೇಮಿಗಳು ಇಬ್ಬರು ಸೇರಿ ಇಲಿ ಪಾಶಾಣವನ್ನು ಕುಡಿದು ಸಾಯಲು ಪ್ರಯತ್ನಿಸಿದ್ದಾರೆ ಎಂದು ನಂಬಿಸಿ, ನನ್ನ ತಮ್ಮ ಪುರುಶೋತ್ತಮನಿಂದ ಇನ್ನೊಂದು ಇಲಿ ಪಾಶಾಣ ಔಷಧಿಯ ಡಬ್ಬಿಯನ್ನು ತರಿಸಿಕೊಂಡು ಇಲಿ ಪಾಶಾಣವನ್ನು ಮೂತಿಗೆ ಸವರಿಕೊಂಡು, ಉಳಿದ ಇಲಿ ಪಾಶಾಣವನ್ನು ಮತ್ತು ಡಬ್ಬಿಯನ್ನು ಕಮಲಾಪುರ ಗ್ರಾಮದ ಪಕ್ಕದಲ್ಲಿ ಬಿಸಾಡಿರುತ್ತಾನೆ ಎಂದರೆ ಸರಿಯಲ್ಲ. ಇಲಿ ಪಾಶಾಣವನ್ನು ಕುಡಿದಿದ್ದ ಕುಮಾರಿ ರಾಧ ಗೌರಿಬಿದನೂರು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ

ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ದಿಃ08-01-2020ರಂದು ರಾತ್ರಿ 10.15 ಗಂಟೆಯ ಸಮಯದಲ್ಲಿ ರಾಧ ಮೃತಪಟ್ಟ ವಿಚಾರ ತಿಳಿಯಿತು ಎಂದರೆ ಸರಿಯಲ್ಲ. ನನ್ನ ಅಣ್ಣ ಮೃತ ರಾಧಳ ಸಾವಿಗೆ ಕಾರಣ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿಪಿ-21ರಂತೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನನ್ನ ಅಣ್ಣನನ್ನು ರಕ್ಷಣೆ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎನ್ ವಕೀಲರಿಂದಃ ಇಲ್ಲ.**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
**(ಎನ್.ವಿ. ಭವಾನಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.